ಮೀನುಗಾರರ ಅವಘಡದ ಪ್ರಕರಣಗಳು

944(991); ಡಾ॥ ರಫೀಕ್ ಅಹ್ಮದ್ ಎಸ್. (ತುಮಕೂರು ನಗರ)

ಅ) ಕಳೆದ ಮೂರು ವರ್ಷಗಳಲ್ಲಿ ಮೀನುಗಾರಿಕೆ ನಡೆಸುವ ಸಂದರ್ಭಗಳಲ್ಲಿ ಅವಘಡ ಉಂಟಾದ ಪ್ರಕರಣಗಳಲ್ಲಿ ಮೀನುಗಾರರಿಗೆ ನೀಡಲಾದ ಪರಿಹಾರದ ಮೊತ್ತ ಎಷ್ಟು (ಸಂಪೂರ್ಣ ವಿವರ ನೀಡುವುದು)?

ಶ್ರೀ ಕೆ. ಅಭಯಚಂದ್ರ (ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು)

ಅ) ಕಳೆದ ಮೂರು ವರ್ಷಗಳಲ್ಲಿ ಮೀನುಗಾರಿಕೆ ನಡೆಸುವ ಸಂದರ್ಭದಲ್ಲಿ ಅವಘಡ ಉಂಟಾದ ಸಂದರ್ಭಗಳಲ್ಲಿ ಪರಿಹಾರ ನಿಧಿಯಿಂದ ಈ ಕೆಳಗಿನಂತೆ ಪರಿಹಾರ ನೀಡಲಾಗಿದೆ.

ಸಂಕಷ್ಟ ಪರಿಹಾರ ನಿಧಿ:–

(ರೂ. ಲಕ್ಷಗಳಲ್ಲಿ)

ಪ್ರಕರಣ	2012–13	2013–14	2014–15
ಜೀವಹಾನಿ	34.12	20.00	45.50
ಬಲೆಹಾನಿ	0.64	0.35	0.13
ದೋಣಿಹಾನಿ	1.79	1.75	2.06
ವೈದ್ಯಕೀಯ ವೆಚ್ಚ	0.10	0.16	–
ಒಟ್ಟು	**36.65**	**22.26**	**47.69**

ಸಾಮೂಹಿಕ ಜನತಾ ಅಪಘಾತ ವಿಮಾ ಯೋಜನೆ:–

(ರೂ. ಲಕ್ಷಗಳಲ್ಲಿ)

ಪ್ರಕರಣ	2012–13	2013–14	2014–15
ಜೀವಹಾನಿ	37.00	31.00	37.50

ಒಟ್ಟು ಪರಿಹಾರ

(ರೂ. ಲಕ್ಷಗಳಲ್ಲಿ)

2012–13	2013–14	2014–15
73.65	53.26	85.19

ಲಿಂಕ್ ಕೆನಾಲ್ ನಿರ್ಮಾಣ

946(966); ಡಾ॥ ಶಿವರಾಜ್ ಪಾಟೀಲ್ ಎಸ್. (ರಾಯಚೂರು ನಗರ)

ಅ) ರಾಯಚೂರು ನಗರ ಮತ್ತು ಜಿಲ್ಲೆಯ ಜನತೆಗೆ ಕುಡಿಯುವ ನೀರಿನ ಅಭಾವವಿರುವುದರಿಂದ ಲಿಂಕ್ ಕೆನಾಲ್ ನಿರ್ಮಾಣ ಮಾಡುವ ಕುರಿತು ಬೇಡಿಕೆ ಸಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಆ) ಬಂದಿದ್ದಲ್ಲಿ, ಈ ಜಿಲ್ಲೆಯ ಹಿತದೃಷ್ಟಿಯಿಂದ ಲಿಂಕ್ ಕೆನಾಲ್ ನಿರ್ಮಾಣ ಪ್ರಸ್ತಾವನೆಯನ್ನು ಅನುಮೋದಿಸಿ ಕಾಮಗಾರಿ ಪ್ರಾರಂಭಿಸಲು ಸರ್ಕಾರಕ್ಕಿರುವ ಅಡೆ–ತಡೆಗಳೇನು: ಈ ಸಂಬಂಧ ಸರ್ಕಾರ ಕೈಗೊಂಡಿರುವ ಕ್ರಮಗಳೇನು (ಸಂಪೂರ್ಣ ವಿವರ ನೀಡುವುದು);

ಇ) ಲಿಂಕ್ ಕೆನಾಲ್ ನಿರ್ಮಾಣ ಪ್ರಸ್ತಾವನೆಯನ್ನು ಅನುಮೋದಿಸಿ ಕಾಮಗಾರಿಯನ್ನು ಯಾವಾಗ ಪ್ರಾರಂಭ ಮಾಡಲಾಗುವುದು (ಸಂಪೂರ್ಣ ವಿವರ ನೀಡುವುದು)?

ಶ್ರೀ M.B. ಪಾಟೀಲ್ (ಜಲ ಸಂಪನ್ಮೂಲ ಸಚಿವರು)

ಅ) ಬಂದಿರುತ್ತದೆ

ಆ) ಕೃಷ್ಣಾ ಮೇಲ್ದಂಡೆ ಯೋಜನೆ ಹಂತ–3ರಡಿಯಲ್ಲಿ ಬರುವ ನಾರಾಯಣಪುರ ಬಲದಂಡೆ ಕಾಲುವೆ ವಿಸ್ತರಣೆ ಉಪ ಯೋಜನೆಯಡಿ ರಾಯಚೂರು ಜಿಲ್ಲೆ ದೇವದುರ್ಗ ಹಾಗೂ ರಾಯಚೂರು ತಾಲ್ಲೂಕುಗಳ ಸುಮಾರು 56,100 ಹೆಕ್ಟೇರ್ ಕ್ಷೇತ್ರಕ್ಕೆ